# ರಾಜ್ಯಮಟ್ಟದ ಯುವಜನೋತ್ಸವಕ್ಕೆ ಚಾಲನೆ

**ವಿಕ ಸುದ್ದಿಲೋಕ** ಮೈಸೂರು

ನಗರದ ಸರಸ್ವತಿಪುರಂನಲ್ಲಿರುವ ಎನ್‌ಎಸ್‌ಎಸ್ ಭವನದಲ್ಲಿ ಹಮ್ಮಿಕೊಂಡಿದ್ದ ರಾಜ್ಯ ಮಟ್ಟದ ಯುವ ಜನೋತ್ಸವಕ್ಕೆ ಮಂಗಳವಾರ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ರಾಷ್ಟ್ರೀಯ ಸೇವಾ ಯೋಜನಾ ಕೋಶದ ಅಧಿಕಾರಿ ಪ್ರತಾಪ್ ಲಿಂಗಯ್ಯ ಚಾಲನೆ ನೀಡಿದರು.

ನಂತರಮಾತನಾಡಿ, ''ವಿದ್ಯಾರ್ಥಿಗಳು ಜವಾಬ್ದಾರಿಯುತ ನಾಗರಿಕರಾಗಿ ಹೊರಹೊಮ್ಮಬೇಕು ಎನ್ನುವುದೇ ರಾಷ್ಟ್ರೀಯ ಸೇವಾ ಯೋಜನೆಯ ಉದ್ದೇಶವಾಗಿದೆ. ರಾಜ್ಯದಲ್ಲಿ 68 ವಿಶ್ವ ವಿದ್ಯಾಲಯಗಳಿಂದ 6.4 ಲಕ್ಷ ಎನ್‌ಎಸ್ ಎಸ್ ಸ್ವಯಂಸೇವಕರು ಇದ್ದಾರೆ. ಅವರೆಲ್ಲ ತಮ್ಮ ಸೇವಾ ಕಾರ್ಯಗಳ ಮೂಲಕ ನಾಡಿನ ಇತರರಿಗೆ ಮಾದರಿ ಆಗಬೇಕು. ಕರ್ನಾಟಕ ವಿವಿಧ ಸಂಸ್ಕೃತಿಗಳ ಬೀಡು.



**ನಗರದ ಸರಸ್ವತಿಪುರಂನಲ್ಲಿರುವ ಎನ್‌ಎಸ್‌ಎಸ್ ಭವನದಲ್ಲಿ ಹಮ್ಮಿಕೊಂಡಿದ್ದ ರಾಜ್ಯ ಮಟ್ಟದ ಯುವಜನೋತ್ಸವಕ್ಕೆ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ರಾಷ್ಟ್ರೀಯ ಸೇವಾ ಯೋಜನಾ ಕೋಶದ ಅಧಿಕಾರಿ ಪ್ರತಾಪ್ ಲಿಂಗಯ್ಯ ಮಂಗಳವಾರ ಚಾಲನೆ ನೀಡಿದರು.**

ಯುವಜನೋತ್ಸವವು ಈ ಎಲ್ಲದರ ಸಮಾಗಮಕ್ಕೆ ವೇದಿಕೆ ಆಗಿದೆ,'' ಎಂದು ಬಣ್ಣಿಸಿದರು.

ಮೈಸೂರು ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್ ಅಧ್ಯಕ್ಷತೆ ವಹಿಸಿದ್ದರು. ಮೈಸೂರು ವಿವಿ ಎನ್‌ಎಸ್‌ಎಸ್ ಕಾರ್ಯಕ್ರಮ ಸಂಯೋಜನಾಧಿಕಾರಿಗಳಾದ ಎಂ.ಬಿ. ಸುರೇಶ, ಬಿ.ಚಂದ್ರಶೇಖರ, ಸಿಂಡಿಕೇಟ್ ಸದಸ್ಯರಾದ ಸಿ. ಬಸವರಾಜು, ಜೆ. ಶಿಲ್ಪಾ, ವಿ.ವಿ. ಸಂಜೆ ಕಾಲೇಜು ಪ್ರಾಧ್ಯಾಪಕ ಆರ್. ನಿಂಗರಾಜು, ಪ್ರಾಧ್ಯಾಪಕ ಟಿ. ರಮೇಶ ಸೇರಿದಂತೆ ಇತರರು ಇದ್ದರು.

ಮೈಸೂರು ವಿಶ್ವವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನೆ ವತಿಯಿಂದ ಹಮ್ಮಿಕೊಂಡಿದ್ದ ಐದು ದಿನಗಳ ಯುವಜನೋತ್ಸವವು ಸಂಗೀತ, ನೃತ್ಯ, ಅಭಿನಯ ಹಾಗೂ ಚರ್ಚಾಗೋಷ್ಠಿಗೆ ವೇದಿಕೆ ಕಲ್ಪಿಸಿತ್ತು. ರಾಜ್ಯದ 26 ವಿಶ್ವವಿದ್ಯಾಲಯಗಳ 125 ಸ್ಪರ್ಧಿಗಳು ಪಾಲ್ಗೊಂಡಿದ್ದಾರೆ. ಭಾವಗೀತೆ, ಜನಪದ, ಭಕ್ತಿ ಗಾಯನ, ಪ್ರಹಸನ, ಪ್ರಬಂಧ, ಸಾಂಸ್ಕೃತಿಕ ಮೆರವಣಿಗೆ, ಚರ್ಚೆ ಸೇರಿದಂತೆ ಹತ್ತು ಹಲವು ಸ್ಪರ್ಧೆಗಳನ್ನು ಆಯೋಜಿಸಲಾಗಿದೆ.




**ಮೈವಿವಿ ಎನ್‌ಎಸ್‌ಎಸ್ ಭವನದಲ್ಲಿ ನಡೆದ ರಾಜ್ಯ ಮಟ್ಟದ ಯುವಜನೋತ್ಸವ ಸಮಾರೋಪದಲ್ಲಿ ಕುಲಸಚಿವೆ ವಿ.ಆರ್. ಶೈಲಜಾ, ಹಣಕಾಸು ಅಧಿಕಾರಿ ಕೆ.ಎಸ್. ರೇಖಾ, ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯ ಡಾ.ಪೂಡೇ ಪಿ. ಕೃಷ್ಣ, ಸಿಂಡಿಕೇಟ್ ಸದಸ್ಯರಾದ ಸಿ. ನಾಗರಾಜು, ಎಚ್.ಎಸ್. ನಟರಾಜು, ಕಾರ್ಯಕ್ರಮ ಸಂಯೋಜನಾಧಿಕಾರಿ ಡಾ.ಎಂ.ಬಿ. ಸುರೇಶ, ತರಬೇತಿ ಸಂಯೋಜಕ ಪ್ರೊ.ಬಿ. ಚಂದ್ರಶೇಖರ್, ಡಾ.ಎಸ್. ಕೃಷ್ಣಪ್ಪ, ಡಾ.ಆರ್. ನಿಂಗರಾಜು, ಡಾ.ಟಿ. ರಮೇಶ್ ಮೊದಲಾದವರು ಭಾಗವಹಿಸಿದ್ದರು.**




ಮೈಸೂರು ವಿಶ್ವವಿದ್ಯಾಲಯದ ಎನ್‌ಎಸ್‌ಎಸ್ ವತಿಯಿಂದ ಆಯೋಜಿಸಿದ್ದ ರಾಜ್ಯ ಮಟ್ಟದ ಯುವಜನೋತ್ಸವದ ಸಮಾರೋಪ ಸಮಾರಂಭದಲ್ಲಿ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳೊಂದಿಗೆ ಕಾರ್ಯಕ್ರಮ ಸಂಯೋಜನಾಧಿಕಾರಿ ಎಂ.ಬಿ. ಸುರೇಶ್, ಎನ್‌ಎಸ್‌ಎಸ್–ಇಟಿಐ ಸಂಯೋಜನಾಧಿಕಾರಿ ಬಿ.ಚಂದ್ರಶೇಖರ್, ಶೇಷಾದ್ರಿಪುರಂ ಶಿಕ್ಷಣ ದತ್ತಿ ಗೌರವ ಕಾರ್ಯದರ್ಶಿ ವೂಡೇ ಪಿ.ಕೃಷ್ಣ, ಕುಲಸಚಿವೆ ವಿ.ಆರ್. ಶೈಲಜಾ, ಹಣಕಾಸು ಅಧಿಕಾರಿ ರೇಖಾ ಕೆ.ಎಸ್., ಸಿಂಡಿಕೇಟ್ ಸದಸ್ಯರಾದ ನಾಗರಾಜು ಸಿ. ಮತ್ತು ನಟರಾಜ ಎಚ್.ಎಸ್. ಪಾಲ್ಗೊಂಡಿದ್ದರು






On **Dated : 20-02-2024 to 24-02-2024** Collabration With NSS, UOM, Mysuru and NSS Cell Youth Empowerment and Sports Department, Govt. Of Karnataka, Bangalore Organized State Level Youth Festival 2023-2024 at NSS Bhavan, Sahukar Channaiah Road, Saraswathipuram, Mysuru. NSS Programme Officer and NSS Volunteers Participeted in Defferent University. From Karnataka. Were present in this Programme Prof.N.K.Loknath, Honourable Vice- Chancellor, UOM, Mysuru. The Programme was Inaugurated by Sri Prathap Lingaih, State NSS Officer, State NSS Cell, Youth Empowerment and Sports Department, Bangalore. Were present in this Programme Chief Gust Sri D Carthigueane, Regional Director, Regional Derectorate of NSS, Bangalore. and Sri.Basavaraju, C.Dr.Shilpa J, Syndicate Mamber, UOM, Mysuru. and NSS Advisory Committee Member, Participated in the Programme. Lecture by resource Parsons for NSS Volunteers

ತಮ್ಮ ನಂಬುಗೆಯ

ರಾ.ಸೇ.ಯೋ. ಕಾರ್ಯಕ್ರಮ ಸಂಯೋಜನಾಧಿಕಾರಿ
Programme Co-ordinator
National Service Scheme
NSS Bhavan
Sahukar Chennaiah Road
Opp. Saraswathipuram Police Station
Saraswathipuram, Mysuru-09